



# ಪ್ಯಾನ್ ಫ್ಲೂಟ್ ಎಂಬ ಸುಷಿರ ವಾದ್ಯ



ಫ್ಲೂಟ್ (ಕೊಳಲು) ಸುಪ್ರಸಿದ್ಧ ಸುಷಿರ ವಾದ್ಯ. ಏನಿದು ಪ್ಯಾನ್ ಫ್ಲೂಟ್? ಹೌದು ಇದೂ ಕೂಡ ಬಿದಿರಿನಿಂದಲೇ ಮಾಡಿದ ಕೊಳಲಿನ ಮಾದರಿಯದೇ ಒಂದು ವಾದ್ಯ.

ಕಜಕಿಸ್ತಾನ ಮೂಲದ ಡೇವಿಡ್ ಡೋರಿಂಗ್ ಪ್ಯಾನ್ ಫ್ಲೂಟ್ ಕಲಾವಿದ. ತನ್ನ ಆರನೇ ವಯಸ್ಸಿಗೇ ವಯೊಲಿನ್ ನುಡಿಸಲು ಕಲಿತ. ಅದಾಗಿ ಕೊಳಲು ವಾದಕ ಎಡ್ವರ್ಡ್ ಸಿಮೊನಿ ನುಡಿಸುವ ಕೊಳಲಿನ ನಾದಕ್ಕೆ ಮಾರುಹೋಗಿ ತಾನೂ ಸ್ವಪ್ರಯತ್ನದಿಂದಲೇ ಪ್ಯಾನ್ ಫ್ಲೂಟ್ ಕಲಿಯಲಾರಂಭಿಸಿದ.

ಹಲವು ಫ್ಲೂಟ್‌ಗಳನ್ನು ಸಾಲಾಗಿ ಜೋಡಿಸಿ ತಯಾರಿಸಿದ ಈ ಕೊಳಲ ನಾದ ಕೇಳಲು ಇಂಪು. ಬಿದಿರು ಅಥವಾ ರೀಡ್‌ನಿಂದ ಮಾಡಿದ ಈ ಕೊಳಲಿನಿಂದ ಡೇವಿಡ್ ಡೋರಿಂಗ್ ಜಾನಪದ ಗೀತೆಗಳನ್ನು ಸುಶ್ರಾವ್ಯವಾಗಿ ನುಡಿಸುತ್ತಾ ಯೂರೋಪ್, ಏಷ್ಯಾ ಹಾಗೂ ಅಮೆರಿಕ ದೇಶಗಳಲ್ಲಿ ಸಂಗೀತ ಕಛೇರಿಗಳನ್ನೂ ನೀಡಿದ್ದಾನೆ.

ಈ ವಾದ್ಯಕ್ಕೆ ಪ್ಯಾನ್ ಪೈಪ್ಸ್ ಅಥವಾ ಸಿರಿಂಕ್ಸ್ ಎಂಬ ಹೆಸರೂ ಇದೆ. ಪ್ಯಾನ್ ಫ್ಲೂಟ್ ಬೇರೆ ಬೇರೆ ಗಾತ್ರಗಳಲ್ಲಿ ಸಿಗುತ್ತವೆ. ಚಿಕ್ಕ ಗಾತ್ರದ ಕೊಳಲಿನಿಂದ ಹಿಡಿದು ಕೊಳಲಿನ ಉದ್ದ ಹೆಚ್ಚುತ್ತಾ ಹೋಗುತ್ತದೆ. ಇದರಲ್ಲಿ ಜಾನಪದ ಸಂಗೀತ ಸೊಗಸಾಗಿ ಕೇಳುತ್ತದೆ. ಪ್ಯಾನ್ ಫ್ಲೂಟ್ ಅನ್ನು ಬಿದಿರು ಮಾತ್ರವಲ್ಲದೆ ಮರ, ಪ್ಲಾಸ್ಟಿಕ್, ಮೆಟಲ್ ಹಾಗೂ ದಂತಗಳಿಂದಲೂ ತಯಾರಿಸಲಾಗುತ್ತದೆ.

ಪ್ಯಾನ್ ಫ್ಲೂಟ್‌ನಿಂದ ಸಂಗೀತದ ಮಂದ್ರ, ಮಧ್ಯ ಸ್ಥಾಯಿ ಮಾತ್ರ ನುಡಿಸಬಹುದು, ತಾರಕ ಮತ್ತು ಅತಿತಾರಕ ಸ್ಥಾಯಿಗಳನ್ನು ನುಡಿಸುವುದು ಕಷ್ಟ. ಆದರೆ ನಾದ ಮಾತ್ರ ಕರ್ಣಾನಂದಕರ.

ಯು. ವೇಣೂರು